# <u>ಮಕ್ಕಳ ಮಾಣಿಕ ಮನೋಹರ ನಿಧಿ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 09
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 427
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 55
4. **Note:** Lyrics given here are as per Ref. 1. The wordings in Ref. 2 and Ref. 3 are similar to Ref. 1.
5. **Note:** Singer has followed these lyrics.

ರಾಗ: ಮುಖಾರಿ ತಾಳ: ಅಟ

ಮಕ್ಕಳ ಮಾಣಿಕ ಮನೋಹರ ನಿಧಿ – ವೈರಿ
ರಕ್ಕಸ ಶಕಟನ ತುಳಿದುದೀಪಾದವೇ ॥ ಪ ॥

ಬಲಿಯ ದಾನವ ಬೇಡಿ ನೆಲವ ಈರಡಿ ಮಾಡಿ
ಜಲಧಿಯ ಪಡೆದದ್ದು ಈ ಪಾದವೇ
ಹಲವು ಕಾಲಗಳಿಂದ ಶಿಲೆ ಶಾಪ ಪಡೆದಿರಲು
ಫಲ ಕಾಲಕ್ಕೊದಗಿದುದೀ ಪಾದವೇ ॥ 1 ॥

ಕಡು ಕೋಪದಿ ಕಾಳಿಂಗನ ಮಡುವ ಕಲಕಿ
ಹೆಡೆಯನು ತುಳಿದುದು ಈ ಪಾದವೇ
ಸಡಗರದಿಂದ ಕೌರವನ ಸಿಂಹಾಸನವ
ಹೊಡೆ ಮುಗುಚಿ ಕೆಡಹಿದುದೀ ಪಾದವೇ ॥ 2 ॥

ಶೃಂಗಾರದಿಂದ ಹೆಂಗಳು ಲಕ್ಷ್ಮಿಯ ಸಹಿತ
ಅಂಗನೆಯರೊತ್ತುವುದೀ ಪಾದವೇ
ಸಂಗ ಸುಖದಿಂದ ಶ್ರೀ ಪುರಂದರ ವಿಠ್ಠಲನ
ಅಂಗದೊಳಡಗಿದ್ದುದೀ ಪಾದವೇ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಶಕಟನ** – ಶಕಟಾಸುರನನ್ನು; ಕಂಸನ ಬಂಟನಾಗಿದ್ದ ಈ ರಾಕ್ಷಸನು ಬಂಡಿಯ ರೂಪದಿಂದ ಕೃಷ್ಣನನ್ನು ಕೊಲ್ಲಲು ಹೋದಾಗ ಮಗುವಾಗಿದ್ದ ಕೃಷ್ಣನು ತನ್ನ ಅಂಗಾಲಿನಿಂದಲೇ ಒದ್ದು ಇವನನ್ನು ಕೊಂದನು.

**ಜಲಧಿಯ** – ಗಂಗೆಯನ್ನು (ತ್ರಿವಿಕ್ರಮಾವತಾರದಲ್ಲಿ).

**ಶಿಲೆ** – ಅಹಲ್ಯೆ (ರಾಮಾವತಾರದಲ್ಲಿ).

**ಫಲಕಾಲಕ್ಕೆ** – ಶಾಪ ವಿಮೋಚನೆಯ ಕಾಲಕ್ಕೆ.

**ಸಡಗರದಿ...** – ಪಾಂಡವರ ದೂತನಾಗಿ ಕೃಷ್ಣನು ದುರ್ಯೋಧನನ ಆಸ್ಥಾನಕ್ಕೆ ಹೋಗಿದ್ದಾಗ, ಸಿಂಹಾಸನದ ಮೇಲೆ ಸೊಕ್ಕಿನಿಂದ ಕೂತಿದ್ದ ದುರ್ಯೋಧನನು ಕೃಷ್ಣನನ್ನು ಮೂದಲಿಸಲು, ಕೃಷ್ಣನು ತನ್ನ ಬಲಗಾಲನ್ನು ಭೂಮಿಗೆ ಒತ್ತಿದೊಡನೆ, ಭೂಮಿ ನಡುಗಿ ದುರ್ಯೋಧನನು ಕೂತಿದ್ದ ಸಿಂಹಾಸನವು ಅಲುಗಾಡಿ ದುರ್ಯೋಧನನು ಕೆಳಗೆ ಬಿದ್ದ ಸಂದರ್ಭ.

**ಆರು ಹೆಂಗಳ** – ಕೃಷ್ಣನ ಷಣ್ಮಹಿಷಿಯರು (ಜಾಂಬವತಿ, ಭದ್ರಾ, ನೀಲಾ, ಕಾಳಿಂದಿ, ಮಿತ್ರವಿಂದಾ, ಲಕ್ಷಣಾ).

**ಅಂಗದೊಳಗೆ** – ಲಿಂಗ ದೇಹದಲ್ಲಿ.

**ಹೊಡೆ ಮುಗುಚಿ ಮುಗುಚು** = ಹೊರಳಿ ಬೀಳು, ಅಂಗಾತ್ತಲಾಗು

**Classification:** Keerthane
**Ankita:** sri purandara vittala
**Location:** NA
**Category:** Krishna Leele,
**Sub-Category:** makkalu, asura, shatru, bali, dAna, bhumi, shapa, sittu, kalinga, kourava, hennu, sukha, ahalya, gange, deha,
**Pravachana:** NA
**Explanation:** NA